(ಇಂದು ದಿನಾಂಕಃ **08-01-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು ಶ್ರೀ ವಿ ಟಿ ಕೆ ವಕೀಲರಿಂದಃ**

ನನ್ನ ವಾದ ಪತ್ರದಲ್ಲಿ ನಮ್ಮ ಒಟ್ಟು ಕುಟುಂಬದ ಆಸ್ತಿಯ ಆದಾಯವನ್ನು ನಮೂದಿಸಿರುವುದಿಲ್ಲ. ನಮ್ಮ ಕುಟುಂಬದ ಆದಾಯವನ್ನು ತೋರಿಸಲು ಆದಾಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ. ನನ್ನ ತಂದೆ ನಿಂಗಪ್ಪನಿಗೆ ನಾನು, 2 ಹಾಗೂ 3 ನೇ ಪ್ರತಿವಾದಿಯರು ಮಕ್ಕಳಿರುತ್ತೇವೆ ಎಂದರೆ ಸರಿ. ನನಗೆ ಸಹೋದರಿಯರು ಇರುವುದಿಲ್ಲ. ಮೊರಬ ಗ್ರಾಮದ ಜಮೀನು ಸರ್ವೇ ನಂಃ 638/2 ಕ್ಷೇತ್ರ 10 ಎಕರೆ 22 ಗುಂಟೆ ಜಮೀನು ನನ್ನ, 2 ಮತ್ತು 3 ನೇ ಪ್ರತಿವಾದಿಯರ ಹೆಸರಿನಲ್ಲಿ ಜಂಟಿಯಾಗಿತ್ತು ಎಂದರೆ ಸರಿ. ಸದರಿ ಸರ್ವೇ ನಂಬರನಲ್ಲಿ ನಾವು ಮೂರು ಜನ ಸಹೋದರರು ದಿನಾಂಕಃ 22-06-2016 ರಂದು ನೋಂದಾಯಿತ ಪಾಲು ವಿಭಾಗ ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸಾಕ್ಷಿಗೆ ಸದರಿ ನೋಂದಾಯಿತ ಪಾಲು ವಿಭಾಗ ಪತ್ರದ ದೃಡಿಕೃತ ನಕಲನ್ನು ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ಒಪ್ಪಿಕೊಂಡಿದ್ದು ಅದನ್ನು **ನಿಡಿ-1** ಎಂದು ಗುರುತಿಸಲಾಯಿತು.

2. ದಾವಾ ಜಮೀನು ಸರ್ವೇ ನಂಃ 78/1 ಹಾಗೂ 78/2 ನೇದ್ದರ ಮೂಲ ಸರ್ವೇ ನಂಃ 78 ಆಗಿರುತ್ತದೆ ಎಂದರೆ ಸರಿ. ಜಮೀನು ಸರ್ವೇ ನಂಃ 78/1 ಹಾಗೂ 77/1 ಗಳು ಮೂಲತಃ ಯೋಗಪ್ಪ, ಫಕ್ಕೀರಪ್ಪ, ಶಿವಪ್ಪ ಹಾಗೂ ಸುಭಾಸ ಗುಡ್ಡೆನ್ನವರಿಗೆ ಸಂಬಂಧಿಸಿದ್ದವು ಎಂದರೆ ಸರಿ. ಸದರಿ ಜಮೀನುಗಳನ್ನು 2 ನೇ ಪ್ರತಿವಾದಿ ದಿನಾಂಕಃ 22-12-2017 ರಂದು ನೋಂದಾಯಿತ ಖರೀದಿ ಪತ್ರದ ಮುಖಾಂತರ ಖರೀದಿಸಿರುತ್ತಾರೆ ಎಂದರೆ ಸರಿ. ನಾನು, 2 ಮತ್ತು 3 ನೇ ಪ್ರತಿವಾದಿಯರು 2016 ರಲ್ಲಿ ಪಾಲು ವಿಭಾಗವಾದ ನಂತರ 2 ನೇ ಪ್ರತಿವಾದಿ ಸದರಿ ಜಮೀನುಗಳನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಕಾರಣ ಸದರಿ 2 ಜಮೀನುಗಳು 2 ನೇ ಪ್ರತಿವಾದಿಯ ಸ್ವ-ಸಂಪಾಧಿತ ಆಸ್ತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ನಂತರ 2 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ಜಮೀನು ಸರ್ವೇ ನಂಃ 77/1 ಕ್ಷೇತ್ರ 10 ಎಕರೆ 37 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ 2 ನೇ ಪ್ರತಿವಾದಿ ಸರ್ವೇ ನಂಃ 78/1 ನ್ನು ಕ್ಷೇತ್ರ 14 ಎಕರೆ 11 ಗುಂಟೆ ಜಮೀನನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸದರಿ ಖರೀದಿ ಪತ್ರಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ **ನಿಡಿ-2 ಮತ್ತು 3** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಸದರಿ ಖರೀದಿ ಪತ್ರಗಳನ್ನು ನಮಗೆ ತಿಳಿಯದೇ ಹಾಗೆ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಮಾರಾಟದ ವಿಷಯ ನಮಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನಮಗೆ ಗೊತ್ತಾಗದ ಹಾಗೆ

ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ಹೆಸರಿನಲ್ಲಿ ಮೊರಬ ಗ್ರಾಮದ ಜಮೀನು ಸರ್ವೇ ನಂಃ 638/4 ಕ್ಷೇತ್ರ 03 ಎಕರೆ 20 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿಡಿ-4** ಎಂದು ಗುರುತಿಸಲಾಯಿತು. ಅದೇ ರೀತಿ ಜಮೀನು ಸರ್ವೇ ನಂಃ 638/3 ಕ್ಷೇತ್ರ 03 ಎಕರೆ 20 ಗುಂಟೆ ಜಮೀನು 3 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿಡಿ-5** ಎಂದು ಗುರುತಿಸಲಾಯಿತು. ಅದೇ ರೀತಿ ಜಮೀನು ಸರ್ವೇ ನಂಃ 679/5 ಕ್ಷೇತ್ರ 3 ಎಕರೆ 21 ಗುಂಟೆ ಜಮೀನು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿಡಿ-6** ಎಂದು ಗುರುತಿಸಲಾಯಿತು. ಅದೇ ರೀತಿ ಜಮೀನು ಸರ್ವೇ ನಂಃ 754/2 ಬ ಕ್ಷೇತ್ರ 03 ಎಕರೆ 29 ಗುಂಟೆ ಜಮೀನು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿಡಿ-7** ಎಂದು ಗುರುತಿಸಲಾಯಿತು. ಅದೇ ರೀತಿ ಜಮೀನು ಸರ್ವೇ ನಂಃ 754/2 ಎ ಕ್ಷೇತ್ರ 03 ಎಕರೆ 29 ಗುಂಟೆ, 755/1+2+3 ಕ್ಷೇತ್ರ 04 ಎಕರೆ 33 ಗುಂಟೆ, 756/1 ಕ್ಷೇತ್ರ 08 ಎಕರೆ ಜಮೀನುಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿಡಿ-8 ರಿಂದ 10** ಎಂದು ಗುರುತಿಸಲಾಯಿತು. ಅದೇ ರೀತಿ ಜಮೀನು ಸರ್ವೇ ನಂಃ 288/1 ಎ/2/2 ಬಿ ಕ್ಷೇತ್ರ 01 ಎಕರೆ ಜಮೀನು 2 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿಡಿ-11** ಎಂದು ಗುರುತಿಸಲಾಯಿತು. ಸದರಿ ಎಲ್ಲಾ ಜಮೀನುಗಳನ್ನು ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನನ್ನ ಪಾಲಿಗೆ ಬಂದ ಜಮೀನನ್ನು ನಾನು ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಜಮೀನುಗಳಲ್ಲಿ ನಾನು, 1 ರಿಂದ 3 ನೇ ಪ್ರತಿವಾದಿಯರು ಬೆಳೆ ಸಾಲ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ 1 ರಿಂದ 3 ನೇ ಪ್ರತಿವಾದಿಯರು ಸೇರಿ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಹಾಗೂ 1 ರಿಂದ 3 ನೇ ಪ್ರತಿವಾದಿಯರ ನಡುವೆ 2016 ರಲ್ಲಿ ನೋಂದಾಯಿತ ಪಾಲು ವಿಭಾಗವಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಕೇವಲ ಸರ್ವೇ ನಂಃ 638/2 ರಲ್ಲಿ ಮಾತ್ರ ಪಾಲು ವಿಭಾಗ ಮಾಡಿಕೊಂಡಿದ್ದು ಉಳಿದ ಜಮೀನುಗಳಲ್ಲಿ ಪಾಲು ವಿಭಾಗ ಮಾಡಿಕೊಂಡಿಲ್ಲ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನನ್ನ ವಾದ ಪತ್ರದಲ್ಲಿ ಬರೆಸಿರುತ್ತೇನೆ. ಪಾಲು ವಿಭಾಗವಾದ ನಂತರ 2 ನೇ ಪ್ರತಿವಾದಿ ಖರೀದಿಸಿದ ಜಮೀನುಗಳಿಗೆ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು, 1 ರಿಂದ 3 ನೇ ಪ್ರತಿವಾದಿಯರು 4 ಮತ್ತು 5 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ .**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**